# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ.10/2019**

**ದೋ.ಸಾ. :11 ಪ್ರಾ.ಸಾ. : 24**

| | | |
|---|---|---|
| ಸಾಕ್ಷಿಯ ಹೆಸರು | : | ರಾಘವೇಂದ್ರ ಮಾದೇವ ನಾಯ್ಕ |
| ತಂದೆಯ ಹೆಸರು | : | ಮಾದೇವ ನಾಯ್ಕ |
| ವಯಸ್ಸು | : | 39 ವರ್ಷ |
| ಕೆಲಸ | : | ಸೆಂಟ್ರಿಂಗ್ |
| ವಾಸ | : | ಕಾರವಾರ |

**ದಿನಾಂಕಃ 16-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ:-**

1. ಸುಮಾರು 6-7 ವರ್ಷಗಳ ಹಿಂದೆ ನಾನು ಮತ್ತು ನನ್ನ ಸ್ನೇಹಿತ ಚಾಸಾ-12 ರಾಘವೇಂದ್ರ ನಾರಾಯಣ ನಾಯ್ಕ ಇಬ್ಬರು ಸವಿತಾ ಹೊಟೇಲಿನ ಬಳಿ ನಿಂತಿದ್ದಾಗ ಕಾರವಾರ ಪೊಲೀಸರು ಒಂದು ಕೊಲೆಯಾಗಿರುತ್ತದೆ ಆದ್ದರಿಂದ ನೀವು ಪಂಚನಾಮೆಗೆ ಬನ್ನಿ ಎಂದು ಕರೆದಿರುತ್ತಾರೆ. ಆ ಸಮಯದಲ್ಲಿ ಪೊಲಿಸರೊಂದಿಗೆ ಇಬ್ಬರು ಆರೋಪಿತರು ಇದ್ದು, ಅವರು ನಮ್ಮನ್ನು ಹಾಗೂ ಪೊಲೀಸರನ್ನು ಕಾರವಾರದ ಸಂಡೆ ಮಾರ್ಕೆಟಿಗೆ ಕರೆದುಕೊಂಡು ಹೋಗಿ, ಅಲ್ಲಿ ಪಿಕ್ಕಾಸಿ ಮತ್ತು ಇತರ ಸಾಮಗ್ರಿಗಳನ್ನು ಮಾರುವ ಒಂದು ಅಂಗಡಿಯನ್ನು ತೋರಿಸಿದರು. ಅಲ್ಲಿ ಪೊಲೀಸರು ಫೋಟೊ ತೆಗೆದರು ಹಾಗೂ ನಮ್ಮ ಒಂದು ಸಹಿಯನ್ನು ಪಡೆದುಕೊಂಡರು.

2. ಆನಂತರ ಪೊಲೀಸರು ತಮ್ಮ ಜೀಪಿನಲ್ಲಿ ನಮ್ಮನ್ನು ಸದಾಶಿಗಡದ ಮೂಲಕ ಮುಂದುಗಡೆ ಯಾವುದೋ ಒಂದು ಊರಿಗೆ ಕರೆದುಕೊಂಡು ಹೋದರು. ಅಲ್ಲಿ ನಮ್ಮ ಜೊತೆಗೆ ಬಂದಿದ್ದ ಆರೋಪಿತರು ಒಂದು ಮನೆಗೆ ಕರೆದುಕೊಂಡು ಹೋಗಿದ್ದರು ಹಾಗೂ ಅಲ್ಲಿ ಒಂದು ಕಬ್ಬಿಣದ ಪಟ್ಟಿಯನ್ನು ಜಪ್ತುಪಡಿಸಿಕೊಂಡರು ಹಾಗೂ ಫೋಟೊ ತೆಗೆದು ನನ್ನ ಸಹಿಯನ್ನು ಪಡೆದುಕೊಂಡರು. ಸಾಕ್ಷಿಯು ತಾನು ಸಹಿ ಮಾಡಿದ ದಾಖಲೆಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ಜಪ್ತು ಪಂಚನಾಮೆಯಾಗಿದ್ದು, ಅದನ್ನು ನಿಪಿ-56 ಎಂದು,

ಅರದಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ–56(ಎ) ಮತ್ತು 56(ಬಿ) ಎಂದು ಗುರುತಿಸಲಾಯಿತು. ಮುದ್ದೆಮಾಲು ನಂ.12 ನ್ನು ಸಾಕ್ಷಿಯು ನೋಡಿ, ನೆನಪಿಲ್ಲ ಎಂದು ನುಡಿದಿರುತ್ತಾರೆ. ಆದರೆ, ಅದರ ಮೇಲಿರುವ ತನ್ನ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಎಂ.ಓ–12(ಎ) ಎಂದು ಗುರುತಿಸಲಾಯಿತು. ನಿಪಿ–42 ಫೋಟೊವನ್ನು ನೋಡಿ, ಸಾಕ್ಷಿಯು ಸದರಿ ಫೋಟೊವನ್ನು ಸಂಡೇ ಮಾರ್ಕೆಟಿನ ಅಂಗಡಿಯಲ್ಲಿ ತೆಗೆದಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿ ಫೋಟೊದಲ್ಲಿ ಕಾಣುವ ಅಂಗಡಿಯಲ್ಲಿ ಚಪಾತಿ ಮಣೆ, ಲಟ್ಟಣಿಗೆ, ಕಾಯಿ ತುರಿಯುವ ಮಣೆ, ಕತ್ತಿಗಳು ಹಾಗೂ ಇತರ ಸಾಮಾಗ್ರಿಗಳು ಇರುತ್ತವೆ ಹಾಗೂ ನಮ್ಮ ಹಾಗೂ ಪೊಲೀಸರ ಜೊತೆಗೆ ಬಂದ ಒಬ್ಬ ವ್ಯಕ್ತಿಯೂ ಸಹ ಇರುತ್ತಾನೆ ಎಂದು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಅದೇ ರೀತಿ ಸಾಕ್ಷಿಯು ನಿಪಿ–32 ಫೋಟೊವನ್ನು ನೋಡಿ, ಸದರಿ ಫೋಟೊವನ್ನು ಯಾವುದೋ ಒಂದು ಊರಿಗೆ ಕರೆದುಕೊಂಡು ಹೋಗಿದ್ದ ಮನೆಯಲ್ಲಿ ಫೋಟೊ ಎಂದು ನೋಡಿ ಗುರುತಿಸಿರುತ್ತಾರೆ. ಅದರಲ್ಲಿ ತಾನು, ಚಾಸಾ–12, ನಮ್ಮ ಬಂದಂತಹ ಎರಡು ಜನ ವ್ಯಕ್ತಿಗಳು, ಪೊಲೀಸರು ಮತ್ತು ಮನೆಯ ಮಾಲೀಕ ಇರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಫೋಟೊದಲ್ಲಿ ಮನೆಯ ಮಾಲೀಕ ಕಬ್ಬಿಣದ ಪಟ್ಟಿಯನ್ನು ಕೊಡುತ್ತಿದ್ದಾರೆ ಎಂದು ನುಡಿಯುತ್ತಾರೆ.

3. ಸಾಕ್ಷಿಗೆ ಈಗ ತೋರಿಸಿದ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ–57 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–57(ಎ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯ ಸಮಯದಲ್ಲಿ ಪೊಲೀಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿರುವುದಿಲ್ಲ. ನಿಪಿ–57 ಪಂಚನಾಮೆಯಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿಲ್ಲ. ಪೊಲೀಸರು ಆದಿನ ಕರೆದುಕೊಂಡು ಬಂದ ಇಬ್ಬರು ವ್ಯಕ್ತಿಗಳು ಆಗ ತೆಳ್ಳಗೆ ಇದ್ದರು ಎಂದು ನುಡಿಯುತ್ತಾರೆ. ಆದರೆ ಈ ದಿನ ನ್ಯಾಯಾಲಯದಲ್ಲಿ ವಿ.ಸಿ.ಯಲ್ಲಿ ಕಾಣುತ್ತಿರುವ 3 ನೇ ಆರೋಪಿಯನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಸರಕಾರಿ ಅಭಿಯೋಜಕರಿಂದಃ–**

4. ಪೊಲೀಸರು ನನ್ನನ್ನು ಪಂಚನಾಮೆಗೆ ಕರೆದ ದಿನಾಂಕ 28–10–2018 ಆಗಿತ್ತು ಎಂದರೆ ಸರಿ. ಸದರಿ ದಿನ ಪೊಲೀಸರು ನನ್ನನ್ನು ಠಾಣೆಗೆ ಕರೆಸಿದ್ದರು ಎಂದರೆ ಸರಿಯಲ್ಲ. ಆ ದಿನ ಪೊಲೀಸರೊಂದಿಗೆ ಬಂದ ಇಬ್ಬರು ವ್ಯಕ್ತಿಗಳು 2 ಮತ್ತು 3 ನೇ ಆರೋಪಿತರು ಆಗಿದ್ದರು ಎಂದರೆ ಸರಿ. ಆ ಸಮಯದಲ್ಲಿ 2 ನೇ ಆರೋಪಿಯು ನಾನು ಮತ್ತು ಶಫಿಯು ಸೇರಿ ಪ್ರೇಮ್ ಕುಮಾರನನ್ನು ಕೊಲೆ ಮಾಡಲು ಕತ್ತಿಗಳನ್ನು ಖರೀದಿ ಮಾಡಿದ್ದು, ನೀವು ನಮ್ಮೊಂದಿಗೆ ಬಂದರೆ ಕತ್ತಿಗಳನ್ನು ಖರೀದಿ ಮಾಡಿದ ಸ್ಥಳವನ್ನು ತೊರಿಸುತ್ತೇನೆ ಎಂದು ಹೇಳಿರುತ್ತಾನೆ ಎಂದರೆ ಸರಿಯಲ್ಲ. ಆದಿನ ಮಧ್ಯಾಹ್ನ 12.15 ಗಂಟೆಗೆ ಠಾಣೆಯಿಂದ ಹೊರಟು, ಸಂಡೇ ಮಾರ್ಕೆಟಿನಲ್ಲಿ 2 ನೇ ಆರೋಪಿ ತೋರಿಸಿದ ಅಂಗಡಿಗೆ ಹೋಗಿದ್ದು, ಅಲ್ಲಿ 2 ನೇ ಆರೋಪಿಯು ನಿಪಿ–42 ರಲ್ಲಿ ಕಾಣುತ್ತಿರುವ ಅಂಗಡಿಯನ್ನು ತೋರಿಸಿ, ತಾನು ಇದೇ ಅಂಗಡಿಯಲ್ಲಿ ಕತ್ತಿಯನ್ನು ಖರೀದಿಸಿರುವುದಾಗಿ ಹೇಳಿರುತ್ತಾನೆ ಎಂದರೆ ಸಾಕ್ಷಿಯು ಅಂಗಡಿಯನ್ನು ತೋರಿಸಿರುತ್ತಾನೆ, ಆದರೆ ಏನು ಹೇಳಿರುತ್ತಾನೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

5. ಆನಂತರ ಈಗ ನ್ಯಾಯಾಲಯದ ಮುಂದಿರುವ 2 ಆರೋಪಿ ಮತ್ತು ನ್ಯಾಯಾಲಯದ ವಿ.ಸಿ.ಯಲ್ಲಿ ಕಾಣುತ್ತಿರುವ 3 ನೇ ಆರೋಪಿ ಸೇರಿ ತಾವು ಕೃತ್ಯಕ್ಕೆ ಬಳಸಿದ ಇನ್ನೊಂದು ಕತ್ತಿಯನ್ನು ಖರೀದಿಸಿದ್ದು, ತಮ್ಮೊಂದಿಗೆ ಬಂದರೆ ಕತ್ತಿ ಖರೀದಿಸಿದ ಸ್ಥಳವನ್ನು ತೋರಿಸುವುದಾಗಿ ಹೇಳಿರುತ್ತಾರೆ ಎಂದರೆ ಸಾಕ್ಷಿಯು ನಮ್ಮ ಮುಂದುಗಡೆ ಹೇಳಿರುವುದಿಲ್ಲ, ಆದರೆ ಪೊಲೀಸ್ ಜೀಪಿನಲ್ಲಿ ಕರೆದುಕೊಂಡು ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ನಂತರ 2 ಮತ್ತು 3 ನೇ ಆರೋಪಿತರು ಮಾರ್ಗ ತೋರಿಸಿದಂತೆ ಪೊಲೀಸರು ನಮ್ಮನ್ನು ಸಂಡೇ ಮಾರ್ಕೆಟಿನಿಂದ ಕದ್ರಾ ಕಡೆಗೆ ಹೋಗುವ ರಸ್ತೆಯಲ್ಲಿ ಹೋಗಿ, ಅಲ್ಲಿಂದ ಅಣಶಿ ಗ್ರಾಮಕ್ಕೆ ಹೋಗಿ, ಅಲ್ಲಿಂದ ಉಳವಿ ಮಾರ್ಗವಾಗಿ 16 ಕಿ.ಮೀ. ದೂರ ಕ್ರಮಿಸಿದಾಗ, 3 ನೇ ಆರೋಪಿಯು ಕುಂಬಾರವಾಡಕ್ಕೆ ಹೋಗುವ ರಸ್ತೆಯನ್ನು ತೋರಿಸಿದನು ಎಂದರೆ ಸರಿ. ಆನಂತರ ಕುಂಬಾರವಾಡಕ್ಕೆ ತಲುಪಿದಾಗ, 3 ನೇ ಆರೋಪಿಯು ಜೀಪನ್ನು ನಿಲ್ಲಿಸುವಂತೆ ಹೇಳಿದ್ದು, ಜೀಪು ನಿಂತ ನಂತರ 2 ಮತ್ತು 3 ನೇ ಆರೋಪಿತರು ಜೀಪಿನಿಂದ ಇಳಿದು, ಅಲ್ಲಿ ತಾವೇ ಮುಂದಾಗಿ ಹೋಗಿರುತ್ತಾರೆ ಹಾಗೂ ನಾವು ಅವರನ್ನು ಹಿಂಬಾಲಿಸಿದ್ದು, ಅವರು ಚಾಸಾ–29 ಸುರೇಶ ಆಚಾರ್ಯ ಎನ್ನುವವರ ಮನೆಯ ಹತ್ತಿರ ಹೋಗಿರುತ್ತಾರೆ ಎಂದರೆ ಸರಿ. ಅಲ್ಲಿ 2 ಮತ್ತು 3 ನೇ ಆರೋಪಿತರು ತಾವು ಪ್ರೇಮ್

ಕುಮಾರನನ್ನು ಕೊಲೆ ಮಾಡುವ ಮೊದಲು, ಒಂದು ಕಬ್ಬಿಣದ ಪಟ್ಟಿಯನ್ನು ನೀಡಿ, ಕತ್ತಿ ಮಾಡಿ ಕೊಡುವಂತೆ ಹೇಳಿದ್ದು, ನಂತರ ಪುನಃ ಹೋಗಿ ವಿಚಾರಿಸಿದಾಗ, ಚಾಸಾ–29 ರವರು ಕತ್ತಿಯನ್ನು ತಯಾರು ಮಾಡಿಲ್ಲದ ಕಾರಣ, ಆರೋಪಿತರು ಈಗಾಗಲೇ ತಯಾರಿಸಿಟ್ಟ ಬೇರೊಂದು ಕತ್ತಿಯನ್ನು ಖರೀದಿ ಮಾಡಿಕೊಂಡು ಹೋಗಿರುವುದಾಗಿ ಹೇಳಿರುತ್ತಾರೆ ಎಂದರೆ ಸಾಕ್ಷಿಯು ನಮ್ಮ ಮುಂದೆ ಹೇಳಿರುವುದಿಲ್ಲ ಎಂದು ನುಡಿಯುತ್ತಾರೆ. ಅಲ್ಲಿ ಚಾಸಾ–29 ರವರು ತಾನು ಹಾಗೂ ತನ್ನ ಮಗ ವಿದ್ಯಾಧರ ಚಾಸಾ–30 ರವರು ಸೇರಿ ಕತ್ತಿಗಳನ್ನು ತಯಾರಿಸುವ ಕೆಲಸವನ್ನು ಮಾಡುತ್ತೇವೆ ಎಂದು ಹೇಳಿರುತ್ತಾರೆ ಎಂದರೆ ಸಾಕ್ಷಿಯು ಚಾಸಾ–29 ರವರು ಮಾತನಾಡಿರುವುದು ನಿಜ, ಆದರೆ ಅವರು ಏನನ್ನು ಮಾತನಾಡಿದ್ದರು ಎಂದು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಅಲ್ಲಿ ಚಾಸಾ–29 ರವರು 2 ಮತ್ತು 3 ನೇ ಆರೋಪಿತರನ್ನು ನೋಡಿ ಗುರುತಿಸಿ, ಸ್ವಲ್ಪ ದಿನಗಳ ಹಿಂದೆ ಇವರೇ ನಮ್ಮ ಮನೆಗೆ ಬಂದು ಒಂದು ಕಬ್ಬಿಣದ ಪಟ್ಟಿಯನ್ನು ನೀಡಿ, ಕತ್ತಿಯನ್ನು ತಯಾರಿಸಿಕೊಂಡುವಂತೆ ಹೇಳಿ ಹೋಗಿದ್ದರು ಎಂದು ಹೇಳಿರುತ್ತಾರೆ ಎಂದರೆ ಸಾಕ್ಷಿಯು ಮಾತನಾಡಿರುವುದು ನಿಜ, ಆದರೆ ಅವರು ಏನನ್ನು ಮಾತನಾಡಿದ್ದರು ಎಂದು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ನಂತರ ಚಾಸಾ–29 ರವರು ತಮ್ಮ ಮನೆಯ ಶೆಡ್ಡಿನಿಂದ ಒಂದು ಕಬ್ಬಿಣದ ಪಟ್ಟಿಯನ್ನು ತಂದು ಹಾಜರುಪಡಿಸಿ, ಆರೋಪಿತರು ಇದೇ ಪಟ್ಟಿಯನ್ನು ನನಗೆ ನೀಡಿ, ಕತ್ತಿಯನ್ನು ಮಾಡಿ ಕೊಂಡುವಂತೆ ಹೇಳಿದ್ದರು ಎಂದು ಹೇಳಿರುತ್ತಾರೆ ಎಂದರೆ ಸಾಕ್ಷಿಯು ಪಟ್ಟಿಯನ್ನು ಹಾಜರುಪಡಿಸಿರುವುದು ನಿಜ ಎಂದು ನುಡಿಯುತ್ತಾರೆ. ನಂತರ ಪೊಲೀಸರು ಅದನ್ನು ಜಪ್ತುಪಡಿಸಿಕೊಂಡು ನಮ್ಮ ಸಹಿಯನ್ನು ಪಡೆದುಕೊಂಡರು ಎಂದರೆ ಸರಿ. ಆಗ ಸಮಯ ಸಂಜೆ 4.00 ಗಂಟೆಯಾಗಿತ್ತು ಎಂದರೆ ಸಾಕ್ಷಿಯು ಸಂಜೆಯಾಗಿತ್ತು, ಆದರೆ ಸಮಯ ಎಷ್ಟಾಗಿತ್ತು ಎಂದು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಈದಿನ ನ್ಯಾಯಾಲದ ಮುಂದಿರುವ 2 ನೇ ಆರೋಪಿ ಆದಿನ ನಮ್ಮ ಜೊತೆಗೆ ಬಂದಿದ್ದವನಾಗಿದ್ದ ಎಂದರೆ ಸಾಕ್ಷಿಯು, ನಾನು ಹಿಂದೆ ನೋಡಿದ ರೀತಿಯಲ್ಲಿ ಆತ ಇರುವುದಿಲ್ಲ ಎಂದು ನುಡಿಯುತ್ತಾರೆ.

6. ನಿಪಿ–57 ಪಂಚನಾಮೆಯಲ್ಲಿ ಸಹಿ ಮಾಡಿದ ದಿನಾಂಕವು 31–10–2018 ಆಗಿತ್ತು ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಆದಿನ ಪೊಲೀಸರು ನನ್ನನ್ನು ಠಾಣೆಗೆ ಕರೆಸಿದ್ದರು ಎಂದರೆ ಸರಿಯಲ್ಲ. ಆದಿನ ಪೊಲೀಸ್ ಸಿಬ್ಬಂದಿಯಾದ ಚಾಸಾ–47 ರವರು ಮೃತ ಪ್ರೇಮ್ ಕುಮಾರನ ಶವಪರೀಕ್ಷೆಯ ಕಾಲಕ್ಕೆ ವೈದ್ಯರು ಡಿ.ಎನ್.ಎ. ಪರೀಕ್ಷೆ ಕುರಿತು

ಸಂಗ್ರಹಿಸಿದ ವಸ್ತುಗಳನ್ನು ಹಾಗೂ ಮೃತನ ಮೈಮೇಲಿದ್ದ ಮುದ್ದೆಮಾಲು ನಂ.10 ಒಳ ಚಡ್ಡಿಯನ್ನು ತಂದು ಹಾಜರುಪಡಿಸಿದ್ದು, ಆ ಸಮಯದಲ್ಲಿ ತನಿಖಾಧಿಕಾರಿಗಳು ನಮ್ಮ ಸಮಕ್ಷಮ ನಿಪಿ–57 ರಂತೆ ಜಪ್ತು ಪಂಚನಾಮೆಯನ್ನು ಮಾಡಿ, ಸದರಿ ವಸ್ತುಗಳನ್ನು ವಶಪಡಿಸಿಕೊಂಡರು ಎಂದರೆ ಸಾಕ್ಷಿಯು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ನಿಪಿ–56 ಪಂಚನಾಮೆಯ ಸಮಯದಲ್ಲಿ ಆರೋಪಿತರು ತಾವು ಕೃತ್ಯಕ್ಕೆ ಬಳಸಿದ ಕತ್ತಿಗಳನ್ನು ಖರೀದಿಸಿದ ಸ್ಥಳಗಳನ್ನು ತೋರಿಸುತ್ತೇವೆ ಎಂದು ಹೇಳಿದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎ.ಎ.ಎ. ವಕೀಲರಿಂದಃ–**

7. ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿತರ ಪರ ಶ್ರೀ ಎಲ್.ಎಸ್.ಕೆ. ವಕೀಲರಿಂದಃ–**

8. ನಾನು ಸೆಂಟ್ರಿಂಗ್ ಕೂಲಿ ಕೆಲಸ ಮಾಡುತ್ತೇನೆ. ಪೊಲೀಸರು ನನ್ನನ್ನು ಪೊಲೀಸ್ ಠಾಣೆಗೆ ಕರೆಸಿರುವುದಿಲ್ಲ. ಪಂಚರಾಗಿ ಬರಲು ಪೊಲೀಸರು ನನಗೆ ನೋಟೀಸ್ ನೀಡಿರುವುದಿಲ್ಲ. ಯಾರ ಕೊಲೆಯಾಗಿದೆ ಎಂಬ ಬಗ್ಗೆ ಪೊಲೀಸರು ನಮಗೆ ಮಾಹಿತಿ ನೀಡಿರುವುದಿಲ್ಲ. ಪೊಲೀಸರು ನಮ್ಮನ್ನು ಯಾವ ದಿನಾಂಕದಂದು ಕರೆದುಕೊಂಡು ಹೋಗಿರುತ್ತಾರೆ ಎಂದು ಹೇಳಲು ನನಗೆ ನೆನಪಿರುವುದಿಲ್ಲ. ಸಂಡೇ ಮಾರ್ಕೆಟಿನಲ್ಲಿ ಕರೆದುಕೊಂಡು ಹೋದ ಅಂಗಡಿಯ ಮಾಲೀಕನ ಹೆಸರು ನನಗೆ ಗೊತ್ತಿಲ್ಲ. ಆದಿನ ಬಂದಂತಹ ಪೊಲೀಸರ ಹೆಸರು ನನಗೆ ಗೊತ್ತಿಲ್ಲ. ಆದಿನ ಪೊಲೀಸರ ಜೊತೆಗೆ ಬಂದಂತಹ ಇಬ್ಬರು ವ್ಯಕ್ತಿಗಳ ಹೆಸರು ನನಗೆ ಗೊತ್ತಿಲ್ಲ ಹಾಗೂ ಪೊಲೀಸರು ಅವರ ಹೆಸರನ್ನು ನನಗೆ ಹೇಳಿರುವುದಿಲ್ಲ. ನಿಪಿ–42 ಫೋಟೊವನ್ನು ತೆಗೆಯುವಾಗ ಪೊಲೀಸರು ಹೇಳಿದಂತೆ ನಾನು ನಿಂತಿರುತ್ತೇವೆ. ಚಾಸಾ–29 ರವರ ಅಂಗಡಿಯಲ್ಲಿ ಏನೇನು ಮಾರಾಟ ಮಾಡುತ್ತಾರೆ ಎಂಬ ವಿಷಯ ನಾನು ಕೇಳಿ ತಿಳಿದುಕೊಂಡಿರುವುದಿಲ್ಲ. ಪಂಚನಾಮೆ ಮಾಡಿದ ಅಂಗಡಿಯ ಚೆಕ್ ಬಂದಿಯನ್ನು ಹೇಳಲು ಬರುತ್ತದೆಯಾ? ಎಂದರೆ ಸಾಕ್ಷಿಯು ಸದರಿ ಅಂಗಡಿಯ ಸುತ್ತಮುತ್ತಲೂ ಅಂಗಡಿಗಳೇ ಇರುತ್ತವೆ, ಅದರೆ ಅವುಗಳು ಯಾರಿಗೆ ಸೇರಿದ್ದವು ಎಂದರೆ ನನಗೆ ಗೊತ್ತಿಲ್ಲ. ಸಂಡೇ ಮಾರ್ಕೆಟ್ ಅಂಗಡಿಯ ಬಳಿಯಲ್ಲಿ ಪೊಲೀಸರು ಯಾವುದೇ ಬರವಣಿಗೆ ಮಾಡಿರುವುದಿಲ್ಲ. ಸಂಡೇ ಮಾರ್ಕೆಟ್ ನಿಂದ ಯಾವುದೋ ಮನೆಗೆ ಕರೆದುಕೊಂಡು

ಹೋಗಲು ಸುಮಾರು 2 ತಾಸು ಆಗಿರುತ್ತದೆ. ಸಂಡೇ ಮಾರ್ಕೆಟ್ ನ ಅಂಗಡಿಯ ಬಳಿ ಇದ್ದಾಗ, ಸುಮಾರು 10 ನಿಮಿಷಗಳ ಕಾಲ ಅಲ್ಲಿ ಇದ್ದೆವು. ಪೊಲೀಸರು ನಮ್ಮನ್ನು ಸದಾಶಿವಗಡ–ಕದ್ರಾ ಮೂಲಕ ಕರೆದುಕೊಂಡು ಹೋಗಿರುತ್ತಾರೆ. ಮಾರ್ಗದ ಮಧ್ಯದಲ್ಲಿ ಯಾವ ಯಾವ ಊರು ಬರುತ್ತದೆ ಎಂದು ನನಗೆ ನೆನಪಿರುವುದಿಲ್ಲ. ಪೊಲೀಸರು ಕರೆದುಕೊಂಡು ಹೋಗಿದ್ದ ಊರಿನ ಹೆಸರನ್ನು ನನಗೆ ಹೇಳಲು ಬರುವುದಿಲ್ಲ. ಪೊಲೀಸರು ಕರೆದುಕೊಂಡು ಹೋಗಿದ್ದ ಮನೆಯು ಯಾರಿಗೆ ಸೇರಿದ್ದು ಎಂದು ನನಗೆ ಹೇಳಲು ಬರುವುದಿಲ್ಲ.

9. ಒಂದು ಕೊಲೆಯ ವಿಚಾರವಾಗಿ ಪೊಲೀಸರು ನಮ್ಮನ್ನು ಕರೆದುಕೊಂಡು ಹೋಗುತ್ತಿದ್ದಾರೆ ಎಂದು ಜೀಪಿನಲ್ಲಿ ನಮಗೆ ತಿಳಿದುಬಂತು. ಚಾಸಾ–29 ರವರ ಮನೆಯಲ್ಲಿ ಏನೇನು ಕಬ್ಬಿಣದ ಸಾಮಗ್ರಿಗಳು ಇದ್ದವು ಎಂದು ನಾನು ನೋಡಿರುವುದಿಲ್ಲ. ಚಾಸಾ–29 ರವರ ಮನೆಯಲ್ಲಿ ಜಪ್ತುಪಡಿಸಿಕೊಂಡ ಕಬ್ಬಿಣದ ಪಟ್ಟಿಯೇ ಈ ನ್ಯಾಯಾಲಯದ ಮುಂದಿರುವ ಮುದ್ದೆಮಾಲು ನಂ.12 ಕಬ್ಬಿಣದ ಪಟ್ಟಿಯಾಗಿದೆ ಎಂದು ನಿಖರವಾಗಿ ಹೇಳಲು ಬರುವುದಿಲ್ಲ, ಸಾಕ್ಷಿಯು ಮುಂದುವರಿದು, ಆ ಸಮಯದಲ್ಲಿ ತಾನು ಸಹಿ ಮಾಡಿರುವುದಾಗಿ ನುಡಿಯುತ್ತಾರೆ. ಚಾಸಾ–29 ರವರ ಮನೆಯಲ್ಲಿ ಪೊಲೀಸರು ಯಾವುದೇ ಬರವಣಿಗೆ ಮಾಡಿರುವುದಿಲ್ಲ. ನಿಪಿ–56 ರಲ್ಲಿ ಸಹಿ ಮಾಡುವಾಗ ಬರವಣಿಗೆ ಆಗಿತ್ತಾ ಅಥವಾ ಇಲ್ಲವಾ ಎಂದರೆ ನನಗೆ ನೆನಪಿಲ್ಲ. ನಿಪಿ–56 ರಲ್ಲಿರುವ ಒಂದು ಸಹಿಯನ್ನು ಕಾರವಾರದ ಸಂಡೇ ಮಾರ್ಕೆಟ್‌ನ ಅಂಗಡಿಯಲ್ಲಿ ಮಾಡಿರುತ್ತೇನೆ ಹಾಗೂ ಮತ್ತೊಂದು ಸಹಿಯನ್ನು ಯಾವುದೋ ಊರಿಗೆ ಕರೆದುಕೊಂಡು ಹೋದ ಮನೆಯ ಬಳಿ ಮಾಡಿರುತ್ತೇನೆ. ಪೊಲೀಸರು ನಮ್ಮನ್ನು ಕರೆದುಕೊಂಡು ಹೋದಾಗ ಅವರ ಜೊತೆ ಒಂದು ಕೆಮರಾ ಇತ್ತು ಹಾಗೂ ಮೂವರು ಪೊಲೀಸರು ಇದ್ದರು ಮತ್ತು ಬೇರೆ ಏನು ಇತ್ತು ಎಂದು ನನಗೆ ನೆನಪಿಲ್ಲ. ನಿಪಿ–56 ಪಂಚನಾಮೆ ತಯಾರಿಸಲು ಪೊಲೀಸರಿಗೆ ನಾನು ಯಾವುದೇ ಮಾಹಿತಿ ನೀಡಿರುವುದಿಲ್ಲ.

10. ನಿಪಿ–42 ಹಾಗೂ ಪಿ–32 ಫೋಟೊಗಳಲ್ಲಿ ಪೊಲೀಸರು ಹೇಳಿದಂತೆ ನಾವು ನಿಂತಿದ್ದೆವು ಎಂದರೆ ಸರಿ. ಅದೇ ರೀತಿ ಪೊಲೀಸರು ಸಹಿ ಮಾಡಲು ಹೇಳಿದ್ದರಿಂದ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ. ಅವುಗಳಲ್ಲಿ ಏನು ಬರೆದಿದ್ದರು ಎಂದು ನನಗೆ ಮಾಹಿತಿ ಇಲ್ಲ ಎಂದರೆ ಸರಿ. ನನ್ನ ಸಮಕ್ಷಮ ಪೊಲೀಸರು ಯಾವುದೇ ಪಂಚನಾಮೆ ಮಾಡಿಲ್ಲ ಎಂದರೆ ಸಾಕ್ಷಿಯು ಇಲ್ಲಿ ಏನು ಮಾಡಿದ್ದರೋ, ಅಲ್ಲಿಯೂ ಅದನ್ನೇ ಮಾಡಿರುತ್ತಾರೆ ಎಂದು

ನುಡಿಯುತ್ತಾರೆ. ಕಾರವಾರದ ಸಂಡೇ ಮಾರ್ಕೆಟಿನಲ್ಲಿ ಫೋಟೋ ತೆಗೆದು ಸಹಿ ಪಡೆದುಕೊಂಡಿರುತ್ತಾರೆ, ಅದೇ ರೀತಿ, ಅಲ್ಲಿಯೂ ಸಹ ಫೋಟೋ ತೆಗೆದು ಸಹಿ ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಈ ದಿನ ನಾನು ಕೊಲೆ ಪ್ರಕರಣಕ್ಕೆ ಬಂದು ಸಾಕ್ಷಿ ನುಡಿಯುತ್ತಿದ್ದೇನೆ. ಆದರೆ, ಯಾರ ಕೊಲೆಯಾಗಿರುತ್ತದೆ ಹಾಗೂ ಯಾರು ಕೊಲೆ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ಸಹಿ ಮಾಡಲು ಹೇಳಿದ್ದರಿಂದ, ನಾನು ಸಹಿ ಮಾಡಿದ್ದು, ಸಹಿ ಮಾಡಿದ ಕಾರಣದಿಂದ ಈ ದಿನ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ.

11. ಅದಾದ ನಂತರ ಪೊಲೀಸರು ನನ್ನನ್ನು ಯಾವತ್ತೂ ಪೊಲೀಸ್ ಠಾಣೆಗೆ ಕರೆಸಿಲ್ಲ ಹಾಗೂ ಯಾವುದೇ ಸಹಿ ಪಡೆದುಕೊಂಡಿರುವುದಿಲ್ಲ. ನನ್ನ ಸಮಕ್ಷಮ ಪೊಲೀಸರು ಯಾವುದೇ ವಸ್ತುಗಳನ್ನು ಜಪ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿ. ಪೊಲೀಸರು ಹೇಳಿದ್ದರಿಂದ ನಾನು ಈದಿನ ನಾನು ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸಾಕ್ಷಿಯು, ನನಗೆ ಸಮನ್ಸ್ ಬಂದ ಕಾರಣ, ನಾನು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ನುಡಿಯುತ್ತಾರೆ.

**ಪಾಟೀ ಸವಾಲುಃ 4 ನೇ ಆರೋಪಿಯ ಪರ ಶ್ರೀ ಎನ್.ವಿ.ಎನ್. ವಕೀಲರಿಂದಃ-**

ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ 5 ನೇ ಆರೋಪಿಯ ಪರ ಶ್ರೀ ಹೆಚ್.ಎಸ್.ಎಸ್. ವಕೀಲರಿಂದಃ-**

ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

*Sd/-*

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ.